ನಿಮ್ಮೊಡನೆ

# ಅನ್ನ ವಿಷವಾದೊಡೆ ಯಾರ ದೂರುವುದು...

ತರಕಾರಿ ಹಾಗೂ ಆಹಾರ ಧಾನ್ಯಗಳಲ್ಲಿನ ವಿಷಕ್ಕೆ ಕೊಳಕು ನೀರಷ್ಟೇ ಕಾರಣವಲ್ಲ, ಕೊಳಕು ವ್ಯವಸ್ಥೆಯೂ ಕಾರಣ. ಭೂಮಂಡಲವನ್ನೇ ತ್ಯಾಜ್ಯದ ಗುಂಡಿಯನ್ನಾಗಿ ಮಾಡಿಕೊಂಡಿರುವ ನಾವು, ಅದರ ಪರಿಣಾಮ ಹಣ್ಣು–ತರಕಾರಿಗಳ ಮೇಲಾಗಬಾರದೆಂದು ಹೇಗೆ ನಿರೀಕ್ಷಿಸುವುದು?

'ತಾಯ ಮೊಲೆವಾಲು ನಂಜಾಗಿ ಕೊಲುವಡೆ, ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ' ಎನ್ನುವ ಬಸವಣ್ಣನವರ ವಚನವನ್ನು ನಾವು ಅನುದಿನ ಸೇವಿಸುವ ಆಹಾರ ನೆನಪಿಸುವಂತಿದೆ. ಹೆಚ್ಚು ತರಕಾರಿ ತಿನ್ನಿ, ಹಣ್ಣುಗಳನ್ನು ಹೇರಳವಾಗಿ ಬಳಸಿ ಎನ್ನುವುದು ವೈದ್ಯರ ಸಲಹೆಯೂ ಹೌದು, ಹಿರಿಯರ ಸಲಹೆಯೂ ಹೌದು. ಆದರೆ, ಆರೋಗ್ಯಭಾಗ್ಯಕ್ಕಾಗಿ ತಿನ್ನುವ ತರಕಾರಿಗಳೇ ವಿಷವಾಗಿ ಪರಿಣಮಿಸಿದರೆ?

ಬೆಂಗಳೂರಿನ ಸೂಪರ್ ಮಾರ್ಕೆಟ್ ಮಳಿಗೆಗಳು, ಹಾಪ್‌ಕಾಮ್ಸ್, ಸಾವಯವ ಮಳಿಗೆಗಳು ಸೇರಿದಂತೆ ವಿವಿಧೆಡೆಗಳಿಂದ 10 ತರಕಾರಿಗಳ 400 ಮಾದರಿಗಳನ್ನು ಸಂಗ್ರಹಿಸಿ ಗುಣಮಟ್ಟ ಪರೀಕ್ಷೆ ನಡೆಸಿರುವ ಅರಣ್ಯ ಇಲಾಖೆಯ 'ಪರಿಸರ ನಿರ್ವಹಣೆ ಮತ್ತು ಸಂಶೋಧನಾ ಸಂಸ್ಥೆ' ತರಕಾರಿಗಳಲ್ಲಿ ಭಾರ ಲೋಹದ ಸಾಂದ್ರತೆ ಹೆಚ್ಚಾಗಿರುವುದನ್ನು ಗುರ್ತಿಸಿದೆ. 'ಆಹಾರ ಮತ್ತು ಕೃಷಿ ಸಂಸ್ಥೆ' ನಿಗದಿಪಡಿಸಿರುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದ ಭಾರ ಲೋಹಗಳು ತರಕಾರಿಗಳಲ್ಲಿ ಪತ್ತೆಯಾಗಿವೆ.

ಬದನೆಕಾಯಿ, ಟೊಮ್ಯಾಟೊ, ದೊಡ್ಡ ಮೆಣಸಿನಕಾಯಿ, ಹುರುಳಿಕಾಯಿ, ಕ್ಯಾರೆಟ್, ಹಸಿ ಮೆಣಸಿನಕಾಯಿ, ಈರುಳ್ಳಿ, ಆಲೂಗಡ್ಡೆ, ಪಾಲಕ್ ಮತ್ತು ಕೊತ್ತಂಬರಿ ಸೊಪ್ಪು ಪರೀಕ್ಷೆಗೊಳಗಾಗಿರುವ ತರಕಾರಿಗಳು. ಈ ತರಕಾರಿಗಳಲ್ಲಿ ಕಬ್ಬಿಣ, ಸೀಸ, ನಿಕ್ಕಲ್, ಕ್ಯಾಡ್ಮಿಯಂನಂತಹ ಲೋಹಗಳು ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿರುವುದು ಪತ್ತೆಯಾಗಿದೆ. ಈ ವಿಷಕಾರಿ ಲೋಹಗಳು, ದೇಹದ ಅಂಗಾಂಗಗಳ ಮೇಲೆ ದುಷ್ಪರಿಣಾಮ ಬೀರಬಲ್ಲವು ಹಾಗೂ ರೋಗನಿರೋಧಕ ಶಕ್ತಿಯನ್ನು ಕುಗ್ಗಿಸಬಲ್ಲವು.

ತರಕಾರಿ ಹಾಗೂ ಆಹಾರ ಧಾನ್ಯಗಳಲ್ಲಿನ ವಿಷಕ್ಕೆ ಕೊಳಕು ನೀರಷ್ಟೇ ಕಾರಣವಲ್ಲ, ಕೊಳಕು ವ್ಯವಸ್ಥೆಯೂ ಕಾರಣ. ಹಣ್ಣು–ತರಕಾರಿಗಳು ಕೀಟಗಳ ಬಾಧೆಗೊಳಗಾಗದಿರಲೆಂದು ನೀರಿನಂತೆಯೇ ಕ್ರಿಮಿನಾಶಕ ಔಷಧಿಗಳನ್ನು ಬಳಸಲಾಗುತ್ತಿದೆ. ತರಕಾರಿಗಳು ಸೊಂಪಾಗಿ ಬೆಳೆಯಲೆಂದು ಹಾಗೂ ಅವುಗಳ ಬಣ್ಣ ಆಕರ್ಷಕವಾಗಿರಲೆಂದು ರಾಸಾಯನಿಕಗಳ ಬಳಕೆಯೂ ನಡೆಯುತ್ತಿದೆ. ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಹಲವು ರೈತರು ಪೇಟೆಯ ತಂತ್ರಗಳಿಗೆ ಮಾರುಹೋಗಿದ್ದಾರೆ ಹಾಗೂ ಕೃಷಿ ಮೌಲ್ಯವನ್ನು ಕುಗ್ಗಿಸುವಂತಹ ಪರಿಸ್ಥಿತಿಯನ್ನು ನಾವೇ ಸೃಷ್ಟಿಸಿದ್ದೇವೆ. ತರಕಾರಿಯ ಗುಣಮಟ್ಟಕ್ಕಿಂತ ಅದರ ಮೇಲ್ನೋಟದ ಬಣ್ಣ ಹಾಗೂ ಹೊಳಪಿಗೆ ಮಾರುಹೋಗುವವರು ಹೆಚ್ಚಾಗಿರುವಾಗ ಅಂತಹ ಉತ್ಪನ್ನಗಳನ್ನೇ ಪೂರೈಸುವ ಮನಸ್ಥಿತಿ ರೂಪುಗೊಳ್ಳುವುದು ಅಸಹಜವೇನಲ್ಲ. ಭೂಮಂಡಲವನ್ನೇ ತ್ಯಾಜ್ಯದ ಗುಂಡಿಯನ್ನಾಗಿ ಮಾಡಿಕೊಂಡಿರುವ ನಾವು, ಅದರ ಪರಿಣಾಮ ಹಣ್ಣು–ತರಕಾರಿಗಳ ಮೇಲಾಗಬಾರದೆಂದು ಹೇಗೆ ನಿರೀಕ್ಷಿಸುವುದು?

ತರಕಾರಿಗಳಲ್ಲಿ ಭಾರ ಲೋಹಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಒಳಚರಂಡಿ ಹಾಗೂ ಕೈಗಾರಿಕಾ ತ್ಯಾಜ್ಯದ ನೀರಿನಲ್ಲಿ ತರಕಾರಿ ಬೆಳೆಯುವುದನ್ನು ನಿರ್ಬಂಧಿಸಬೇಕು ಹಾಗೂ ನಗರದ ಹೊರವಲಯದಲ್ಲಿ ತರಕಾರಿ ಬೆಳೆಯುವುದನ್ನು ನಿರ್ಬಂಧಿಸಬೇಕು ಎಂದು 'ಪರಿಸರ ನಿರ್ವಹಣೆ ಮತ್ತು ಸಂಶೋಧನಾ ಸಂಸ್ಥೆ'ಯ ವರದಿ ಸಲಹೆ ನೀಡಿದೆ. ಕಾರ್ಯಸಾಧುವಲ್ಲದ ಇಂಥ ಸಲಹೆಗಳಿಂದ ಸಮಸ್ಯೆ ಬಿಗಡಾಯಿಸಬಹುದೇ ಹೊರತು ಪರಿಹಾರ ದೊರಕುವುದಿಲ್ಲ. ತರಕಾರಿ ಸೇರಿದಂತೆ ಅಸುರಕ್ಷಿತ ಆಹಾರ ಪದಾರ್ಥಗಳನ್ನು ಮಾರುವವರಿಗೆ 'ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006'ರ ಸೆಕ್ಷನ್ 59ರ ಅನ್ವಯ 6 ತಿಂಗಳಿಂದ 6 ವರ್ಷದವರೆಗೆ ಜೈಲುವಾಸ ಮತ್ತು 1 ಲಕ್ಷದಿಂದ 5 ಲಕ್ಷ ರೂಪಾಯಿವರೆಗೆ ದಂಡ ವಿಧಿಸಬಹುದಾಗಿದೆ ಎನ್ನುವ 'ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ'ದ ಎಚ್ಚರಿಕೆಯಿಂದಲೂ ಹೆಚ್ಚಿನ ಉಪಯೋಗವಿಲ್ಲ. ರೈತರಿಗೆ ಮತ್ತು ವ್ಯಾಪಾರಿಗಳಿಗೆ ಕಾನೂನಿನ ಗುಮ್ಮ ತೋರಿಸುವುದಕ್ಕೆ ಮೊದಲು, ಉತ್ತಮ ಆಹಾರೋತ್ಪನ್ನಗಳ ಕೃಷಿಗೆ ಅಗತ್ಯವಾದ ಸವಲತ್ತುಗಳನ್ನು ಕಲ್ಪಿಸಬೇಕಾಗಿದೆ. ಕೊಳಚೆ ನೀರನ್ನು ತರಕಾರಿಗಳಿಗೆ ಬಳಸಬಾರದೆಂದು ಹೇಳುವ ಮೂಲಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಬದಲು, ಕಲುಷಿತ ನೀರನ್ನು ಶುದ್ಧೀಕರಿಸಿ ಕೊಡುವ ಉತ್ತರದಾಯಿತ್ವವನ್ನು ಸರ್ಕಾರ ಪ್ರದರ್ಶಿಸಬೇಕಾಗಿದೆ. ಕೃಷಿ ಉತ್ಪನ್ನಗಳನ್ನು ನಿಗದಿತವಾಗಿ ಪರೀಕ್ಷೆಗೊಳಪಡಿಸಿ, ರೈತರು ಹಾಗೂ ಬಳಕೆದಾರರಿಗೆ ಅರಿವು ಮೂಡಿಸಬೇಕಾದುದೂ ಸರ್ಕಾರದ ಹೊಣೆಗಾರಿಕೆಯೇ. ವಿಪರ್ಯಾಸವೆಂದರೆ, ಗುಣಮಟ್ಟದ ಕುಡಿಯುವ ನೀರನ್ನೇ ಎಲ್ಲರಿಗೂ ಒದಗಿಸುವುದು ಸರ್ಕಾರಗಳಿಗೆ ಸಾಧ್ಯವಾಗಿಲ್ಲ. ಹೀಗಿರುವಾಗ, ಕೃಷಿಗೆ ತಿಳಿ ನೀರನ್ನು ವ್ಯವಸ್ಥೆ ಒದಗಿಸುತ್ತದೆಂದು ನಿರೀಕ್ಷಿಸುವುದು ಹೇಗೆ?

ಪರಿಸರ ಸಂರಕ್ಷಣೆಯ ಅರಿವನ್ನು ಸಾರ್ವಜನಿಕವಾಗಿ ಆಳವಾಗಿ ಮೂಡಿಸುವುದು ಇಂದಿನ ಅಗತ್ಯ. ಈ ನಿಟ್ಟಿನಲ್ಲಿ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಮಾಡಬೇಕು. ಸರ್ಕಾರದ ಮಟ್ಟದಲ್ಲಿ ಪರಿಸರ ಸಂರಕ್ಷಣೆಯ ಪ್ರಾಮಾಣಿಕ ಕಾಳಜಿ ವ್ಯಕ್ತವಾದರೆ, ಸಾರ್ವಜನಿಕ ಬದುಕಿನಲ್ಲೂ ಅದು ಪ್ರತಿಫಲನಗೊಳ್ಳುತ್ತದೆ.

ವಿಷಯುಕ್ತ ತರಕಾರಿಗಳು ಬೆಂಗಳೂರಿನಂಥ ಮಹಾನಗರಗಳಿಗೆ ಸೀಮಿತವಾದ ಸಮಸ್ಯೆಯಲ್ಲ. ಇವೇ ತರಕಾರಿಗಳು ಪಟ್ಟಣಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲೂ ಬಳಕೆಯಾಗುತ್ತವೆ. ಕೃಷಿ ಉತ್ಪನ್ನಗಳನ್ನು ವಿಷಮುಕ್ತಗೊಳಿಸುವ ಪ್ರಕ್ರಿಯೆ ವ್ಯಕ್ತಿ ಹಾಗೂ ಸಮಷ್ಟಿಯ ನೆಲೆಯಲ್ಲಿ ಆಂದೋಲನದ ರೂಪ ಪಡೆಯುವುದು ಇಂದಿನ ತುರ್ತು.

■ ರಘುನಾಥ ಚ.ಹ.



ಈಶ್ವರ್